# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)

ದೂರವಾಣಿ ಸಂಖ್ಯೆ: 08222-240377
ಮೊಬೈಲ್‌ಸಂಖ್ಯೆ:9448499992
E-mail: aeebilikere@rediffmail.com

ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿ),
ರವರ ಕಛೇರಿ ಚಾ.ವಿ.ಸ.ನಿ.ನಿ.,
ಕಾ ಮತ್ತು ಪಾ ಉಪವಿಭಾಗ, ಬಿಳಿಕೆರೆ.

ಕ್ರಸಂ: ಸ.ಕಾ.ನಿ.ಇಂ(ವಿ)/ಹಿ.ಸ/ತಾಂಸ/ಸೆಸ್ಕ್/ಬಿಳಿಕೆರೆ/ಉ.ವಿ/2019/ 119. ದಿನಾಂಕ: 4.3.2019

ದಿನಾಂಕ: 28.02.2019 ರಂದು ಮಧ್ಯಾಹ್ನ 03:00 ಗಂಟೆಗೆ ಮಾನ್ಯ ಅಧೀಕ್ಷಕ ಇಂಜಿನಿಯರ್ (ಪ್ರಭಾರ), ಶ್ರೀ ಮುಜಾಮಿಲ್ ಅಹ್ಮದ್ ರವರ ಅಧ್ಯಕ್ಷತೆಯಲ್ಲಿ ನಡೆದ ಬಿಳಿಕೆರೆ ಕಾರ್ಯ ಮತ್ತು ಪಾಲನ ಉಪ ವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ಮುಜಾಮಿಲ್ ಅಹ್ಮದ್ ರವರು, ಅಧೀಕ್ಷಕ ಇಂಜಿನಿಯರ್ (ಪ್ರಭಾರ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು.
2. ಶ್ರೀ ಸುನೀಲ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹುಣಸೂರು.
3. ಶ್ರೀಮತಿ ವಿಜಯರತ್ನ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಬಿಳಿಕೆರೆ.
4. ಶ್ರೀಮತಿ ಪುಟ್ಟಮ್ಮ, ಹಿರಿಯ ಸಹಾಯಕಿ(ಪ್ರಭಾರ), ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.
5. ಶ್ರೀ ಮಣಿಕಂಟ, ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಬಿಳಿಕೆರೆ.
6. ಶ್ರೀ ವೆಂಕಟೇಶ್, ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬಿಳಿಕೆರೆ
7. ಶ್ರೀ ಎಂ.ಎಸ್ ಚಂದ್ರಶೇಖರ್, ಕಿರಿಯ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಕೆ.ಎಸ್.ಗದ್ದಿಗೆ.
8. ಶ್ರೀ ಜೆ.ಮಹದೇವು, ಕಿರಿಯ ಇಂಜಿನಿಯರ್(ವಿ)(ಪ್ರಭಾರ), ಕಾ ಮತ್ತು ಪಾ ಶಾಖೆ, ಬೋಳನಹಳ್ಳಿ.

ಸಭೆಯಲ್ಲಿ ಉಪ ಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಅಧೀಕ್ಷಕ ಇಂಜಿನಿಯರ್ (ಪ್ರಭಾರ), ರವರು ವಿದ್ಯುತ್ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಅಯೋಗದ ಸೂಚನೆ ಮೇರೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಉಪ ವಿಭಾಗದ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪ ವಿಭಾಗದ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಬಿಳಿಕೆರೆ ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ಒಟ್ಟು 06 ಸಂಖ್ಯೆ ಸಮಸ್ಯೆಗಳು 06 ಸಂಖ್ಯೆ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿರುತ್ತದೆ.

ಮು.ತಿ.ನೋ

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಬಸವರಾಜು, ಕೊಳಗಟ್ಟ ಗ್ರಾಮ. ಮೊಬೈಲ್ ಸಂಖ್ಯೆ: 973199327 | ಕೊಳಗಟ್ಟ ಗ್ರಾಮದಲ್ಲಿ ಶಿಥಿಲಗೊಂಡ ವಿದ್ಯುತ್ ಕಂಬಗಳು ಬದಲಾಯಿಸಿಕೊಡುವಂತೆ ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ದೋಳನಹಳ್ಳಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. |
| 2 | ಬಿ.ಕೆ.ಸೋಮಣ್ಣ ಬಿನ್ ಬಿ.ಕೆ ಕಮರಿನಾಯಕ, ಬೆಂಕಿಪುರ ಗ್ರಾಮ ಮೊಬೈಲ್ ಸಂಖ್ಯೆ: 9449598621 | ಸೋಮಣ್ಣ ನವರ ಮನೆಯ ಮೇಲೆ ಹಾದು ಹೋಗಿರುವ 11 ಕೆ.ವಿ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಿಕೊಡಲು ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಕೆ.ಎಸ್.ಗದ್ದಿಗೆ ಶಾಖಾಧಿಕಾರಿಯವರಿಗೆ ತಕ್ಷಣವೇ ಸ್ಥಳ ಪರಿಶೀಲಿಸಿ ಕಂಬವನ್ನು ಸ್ಥಳಾಂತರಿಸಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. |
| 3 | ಬಿ.ಕುಮಾರ್, ಅಂಟಿಲ್ಲಾ ಟೀಕ್ ಗಾರ್ಡನ್, ಲೇ ಓಟ್, ಮನುಗನಹಳ್ಳಿ | 24 ಗಂಟೆಗಳ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಬಿಳಿಕೆರೆ ರವರಿಗೆ ಸೂಚಿಸಿದರು. |
| 4 | ಆದರ್ಶ.ಎಸ್, ಮನುಗನಹಳ್ಳಿ | ಡಿಜಿಟಲ್ ಮೀಟರ್ ಬಸಲಾಯಿಸಿಕೊಡುವಂತೆ ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಬಿಳಿಕೆರೆ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ವರದಿ ನೀಡಲು ಸೂಚಿಸಿದರು. |
| 5 | ಉಂಡವಾಡಿ ಗ್ರಾಮಸ್ಥರು | ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕೋರಿದರು | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ದೋಳನಹಳ್ಳಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. |

ಸಭೆಯ ಕೊನೆಯಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್ (ಪ್ರಭಾರ) ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಬಂಧಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮಕ್ಕೆಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ : 10
ಮೌಖಿಕ ದೂರುಗಳ ಸಂಖ್ಯೆ : 05
ಪತ್ರಲಿಖಿತ ದೂರುಗಳ ಸಂಖ್ಯೆ : 00

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ,
ಬಿಳಿಕೆರೆ